ವಾತಾವರಣ ಕೂಡ ಇಲ್ಲ, ಯಾವ ಒಂದು ಪರಿಸ್ಥಿತಿ ಕೂಡ ಇಲ್ಲ ಎಂಬ ಭಾವನೆ ನಮ್ಮ ಸದನದ ಶಾಸಕರಿಗೆ ಇರಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ —ಈ ಬಗ್ಗೆ ತನಿಖೆ ಮಾಡಿದರೆ ಗೊತ್ತಾಗುತ್ತದೆ. ೧೦೦ಕ್ಕೆ ೮೦ ಭಾಗ ಹೊರಗಡೆಯವರಿಗೆ ಇಲ್ಲಿನ ಉದ್ಯೋಗಗಳು ಹೋಗಿವೆ. ವಿಕ್ರಾಂತ್ ಟೈಮರ್ಸ್, ಕುದುರೆ ಮುಖ ಇತ್ಯಾದಿ ಕಾರ್ಖಾನೆಗಳಲ್ಲಿ ಎಷ್ಟು ಜನ ಇದ್ದಾರೆ ? ರಾಷ್ಟ್ರದ ಕೈಗಾರಿಕೆಗಳಲ್ಲಿ, ಬೇರೆ ಬೇರೆ ಕೈಗಾರಿಕೆಗಳಲ್ಲಿ ಎಷ್ಟು ಜನ ಕನ್ನಡಿಗರು ಇದ್ದಾರೆ ? ತನಿಖೆ ಮಾಡಿ ನೋಡಿದರೆ ೧೦೦ಕ್ಕೆ ೯೦ ಭಾಗ ಉದ್ಯೋಗ ಬೇರೆ ರಾಜ್ಯದವರಿಗೆ ಹೋಗಿದೆ.

ಪ್ರಶ್ನೆ ಸಂಖ್ಯೆ ೧೨೦ (೪೦೧)

ಶ್ರೀ ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಮತ್ತು ೧೨೭ನೇ ಪ್ರಶ್ನೆ ಶ್ರೀ ಜಿ. ಎಸ್. ಆಚಾರ್ ರವರದ್ದು. ಇವೆರಡೂ ಒಂದೇ ವಿಷಯ ಆಗಿರುವುದರಿಂದ ಶ್ರೀ ಆಚಾರ್ ರವರು ಪ್ರಶ್ನೆ ಹಾಕಲಿ ಎರಡಕ್ಕೂ ಜೊತೆಯಲ್ಲಿ ಉತ್ತರಗಳನ್ನು ಕೊಡುತ್ತೇನೆ.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ.ಎಸ್. ಆಚಾರ್‌ರವರು ಅವರ ಪರವಾಗಿ ಪ್ರಶ್ನೆ ಕೇಳಲು ನನಗೆ ಅನುಮತಿ ಕೊಟ್ಟಿದ್ದಾರೆ. ಆದ್ದರಿಂದ ನಾನು ಅವರ ಪರವಾಗಿ ಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು.—ಆಗಬಹುದು.

ಸ್ವಾತಂತ್ರ್ಯ ಹೋರಾಟಗಾರರ ಪೆನ್‌ಷನ್ ಬಗ್ಗೆ

೩೬೫. ಶ್ರೀ ಜಿ. ಎಸ್, ಆಚಾರ್ (ಬೈಂದೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸ್ವಾತಂತ್ರ್ಯ ಹೋರಾಟಗಾರರು ಪೆನ್‌ಷನ್‌ಗೆ ಅರ್ಜಿ ಸಲ್ಲಿಸಿದ್ದ ಇನ್ನೂ ಮಂಜೂರಾಗದೇ ಇರುವ ಅರ್ಜಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡಿ ಎಂದಿನಿಂದ ಬಾಕಿ ಇದೆ ಎಂಬುದರ ಮಾಹಿತಿಯೊದಗಿಸುವುದು).

ಆ) ಈ ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು, ಸಂಸದೀಯ ಮತ್ತು ವ್ಯವಹಾರಗಳ ಸಚಿವರು).—(ಮುಖ್ಯಮಂತ್ರಿಗಳ ಪರವಾಗಿ)

ಅ) ಸುಮಾರು ೨೬೦ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪಿಂಚಣಿ ನೀಡುವ ಯೋಜನೆಯನ್ನು ೧೯೬೯ ನೇ ಸಾಲಿನಿಂದ ಜಾರಿಗೆ ತಂದಿದೆ. ಈ ಯೋಜನೆಯನ್ನು ಪ್ರಾರಂಭಿಸಿದಂದಿನಿಂದ ಆಯಾಯಾ ಕಾಲಕಾಲಕ್ಕೆ ನಿಯಮಾವಳಿಗಳನ್ನು ತಿದ್ದುಪಡಿ ಮಾಡಲಾಗಿರುತ್ತದೆ. ಸದರೀ ಯೋಜನೆಯಡಿಯಲ್ಲಿ ರಾಜ್ಯಗೌರವಧನ ಮಂಜೂರಾತಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಕಾಲಕಾಲಕ್ಕೆ ಮುಂದುವರೆಸಲಾಗುತ್ತಿದ್ದು, ದಿನಾಂಕ ೩೧-೧೨-೮೨ ರಲ್ಲಿ ಅಂತಿಮವಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿ ನಿರ್ಧರಿಸಲಾಗಿದೆ. ಯೋಜನೆಯ ಪ್ರಾರಂಭದಿಂದ ಇಲ್ಲಿಯವರೆಗೆ ರಾಜ್ಯ ಗೌರವಧನ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದವರಲ್ಲಿ ಯಾರ್ಯಾರು ಯಾವ ಸಮಯದಲ್ಲಿ ಅರ್ಜಿ ಸಲ್ಲಿಸಿದ್ದಾರೆಂಬ ಬಗ್ಗೆ ಮಾಹಿತಿ ನೀಡಲು ದುಸ್ತರವಾಗುತ್ತದೆ. ಆದಾಗ್ಯೂ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ೧೯೬೯ ರಿಂದ ಇಲ್ಲಿಯವರೆಗೆ ಸುಮಾರು ೩೧,೧೯೬ ಅರ್ಜಿಗಳಂ ರಾಜ್ಯ ಗೌರವಧನ ಮಂಜೂರಾತಿ ಕೋರಿ ಸರ್ಕಾರಕ್ಕೆ ಬಂದಿರುತ್ತವೆ. ಇಲ್ಲಿಯವರೆಗೆ ಸುಮಾರು ೧೯,೫೫೮ (೩೧-೩-೯೦ ರ ವರೆಗೆ) ಮಂದಿನ ರಾಜ್ಯ ಗೌರವಧನ ಮಂಜೂರಾತಿ ನೀಡಿದ್ದು ಸುಮಾರು ೨,೬೦೦ ರಾಜ್ಯ ಗೌರವಧನ ಅರ್ಜಿಗಳು ಇನ್ನೂ ವಿಂಜೂರಾಗದೇ ಬಾಕಿ ಉಳಿದಿವೆ.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.